ಪ್ರತಿಯೊಬ್ಬರಲ್ಲಿಯೂ ತಮ್ಮದೇ ಆದ ನಿರ್ದಿಷ್ಟ ಅಭಿಪ್ರಾಯಗಳು ಇರುತ್ತವೆ. ಆ ಅಭಿಪ್ರಾಯಗಳ ತಳಭಾಗದಲ್ಲಿ ಈ ಒಪ್ಪಿಗೆಯ ಭದ್ರ ತಳಹದಿ ಇರುತ್ತದೆ. ಹೀಗಾಗಿಯೇ ಅವು ತಕ್ಷಣ ಬದಲಾಗುವುದಿಲ್ಲ. ಅದನ್ನು ದುರಾಗ್ರಹವೆಂದು ಹೇಗೆ ಹೇಳಬಹುದು?'

'ದುರಾಗ್ರಹ ಅಲ್ಲದಿರಬಹುದು. ಆದರೆ ನೀನು ಹೇಳುವ ಆ ತಳಹದಿ ಸರಿಯೋ ತಪ್ಪೋ ಎನ್ನುವುದನ್ನು ಚೆನ್ನಾಗಿ ತಿಳಿದುಕೊಳ್ಳುವುದು ತುಂಬಾ ಅಗತ್ಯ. ಇನ್ನೂ ಒಂದು ವಿಚಾರವನ್ನು ಲಕ್ಷ್ಯದಲ್ಲಿ ಇಟ್ಟುಕೋ. ಪ್ರವಾಹದ ವಿರುದ್ಧ ಈಜಲು ಬಯಸುವುದಾದರೆ ತನ್ನ ದೇಹದಲ್ಲಿ ದಡ ಸೇರಿಕೊಳ್ಳುವ ಬಲ ಇದೆಯೇ ಎನ್ನುವುದನ್ನು ಮೊದಲು ತಿಳಿದುಕೊಂಡು ಆಮೇಲೆ ಆ ಸಾಹಸವನ್ನು ಕೈಗೊಳ್ಳುವುದು ಮೇಲು.'

ಚಾರು ನಗುತ್ತಾಳೆ. ಅವಳಿಗೆ ಗೊತ್ತಿದೆ, ತಾನು ಹೀಗೆ ಒಂಟಿಯಾಗಿ ಇರುವುದು ಸರ್‌ಗೆ ಇಷ್ಟವಿಲ್ಲ. ಅದಕ್ಕಾಗಿಯೇ ಅವರು ಪ್ರವಾಹದ ವಿರುದ್ಧ ಈಜುವುದು ಎಂದು ಹೇಳುತ್ತಿದ್ದಾರೆ. ಎಂತಹ ಪ್ರವಾಹ? ಸಮಾಜದ್ದೇ ಅಥವಾ ಪ್ರಕೃತಿಯದೇ. ಇದೇ ರೀತಿ ಅವಳ ತಾಯಿಯೂ ಅವಳಿಗೆ ಅನೇಕ ಬಾರಿ ಹೇಳುತ್ತಿದ್ದರು. ಮದುವೆಯಿಲ್ಲದೆ ಒಬ್ಬಳೇ ಇರಬೇಕೆಂದು ಅವಳು ನಿರ್ಧರಿಸಿದವಳಲ್ಲ; ಅದು ಹಾಗೆ ಘಟಿಸಿತು ಅಷ್ಟೇ.

ಹಾಗೆ ಯಾರಾದರೂ ಅವಳ ಬದುಕಿನಲ್ಲಿ ಬಂದಿದ್ದರೆ ಚಾರು ಖಂಡಿತ ವಿವಾಹವಾಗುತ್ತಿದ್ದಳು. ಬಂದಿಲ್ಲ ಎನ್ನುವ ಹಾಗೂ ಇಲ್ಲ. ಅವರ ವೈಚಾರಿಕ ಮಟ್ಟ ಸರಿ ಹೊಂದಲಿಲ್ಲ ಎನ್ನಬಹುದು. ಬೇರೆ ಯಾವುದಾದರೂ ವಿಚಾರದಲ್ಲಿಯಾದರೆ ಚಾರು ರಾಜಿ ಮಾಡಿಕೊಳ್ಳುತ್ತಿದ್ದಳು. ಆದರೆ ಈ ವಿಚಾರದಲ್ಲಿ ಮಾತ್ರ ರಾಜಿ ಮಾಡಿಕೊಂಡು ಹೊಂದಿಕೊಳ್ಳುವುದು ಅವಳಿಗೆ ಸರಿ ಬಂದಿರಲಿಲ್ಲ.

ಮದುವೆಯಾಗಿಲ್ಲವೆಂದು ತನಗೆ ಪಶ್ಚಾತ್ತಾಪವಿದೆಯೇ?

ಚಾರು ಕಣ್ಣುಮುಚ್ಚಿಕೊಂಡು ತನ್ನೊಳಗೆ ಈ ಪ್ರಶ್ನೆಗೆ ಉತ್ತರ ಹುಡುಕಲಾರಂಭಿಸಿದಳು.

ಇಲ್ಲ, ಇದುವರೆಗೆ ಎಂದೂ ಇಲ್ಲ.

ಮದುವೆಯಾದವರ ಕುರಿತು ತನ್ನಲ್ಲಿ ಎಂದಾದರೂ ಅಸಹನೆ ಮೂಡಿದ್ದು ಇದೆಯೇ?

ಇದುವರೆಗೆ ಹಾಗೆ ನಡೆದಿಲ್ಲ.

ಮನಸ್ಸಿನಲ್ಲೊಂದು, ಹೊರಗೊಂದು ಈ ರೀತಿ ತಾನು ವರ್ತಿಸಲಾರೆ.

ಹೀಗಿರುವಾಗ ಸರ್ ಯಾಕೆ ಹಾಗೆ ಹೇಳುತ್ತಾರೆ?

ಅದನ್ನು ಅವರಲ್ಲಿಯೇ ಕೇಳೋಣವೆಂದು ಅವಳು ಕಣ್ಣು ತೆರೆದಳು. ಆದರೆ ಅವರು ತಮ್ಮದೇ ಆಲೋಚನೆಯಲ್ಲಿ ಕಳೆದುಹೋಗಿದ್ದರು. ಅವರ ತುಟಿಗಳು ಮನಸ್ಸಿನ ನಿಶ್ಶಬ್ದ ಮಾತುಗಳಿಗೆ ಆಕಾರ ನೀಡುತ್ತಿದ್ದವು.

ನಿರ್ಮಲಾ! ಕನಸಿನ ಕಾಡಿಗೆಯನ್ನು ಕಣ್ಣಿಗೆ ಹಚ್ಚಿಕೊಂಡು ಬದುಕುತ್ತಿದ್ದ ನಿರ್ಮಲಾ ಅವರ ಪತ್ನಿ. ಚಾರು ಹೇಳಿದ ಹಾಗೆ ಅದು ನಿರ್ದಿಷ್ಟವಾಗಿ **illusion of belonging** ಆಗಿತ್ತೇ. ಶೀ! ಅವರು ಒಬ್ಬರು ಇನ್ನೊಬ್ಬರಿಗಾಗಿಯೇ ಬದುಕುತ್ತಿದ್ದವರು. ಆದರೆ ನಿರ್ಮಲಾ ಎಲ್ಲವನ್ನೂ ಅರ್ಧದಲ್ಲಿಯೇ ಬಿಸಾಡಿ ಹೋದಳು. ಈಗ ಅದು **illusion** ಆಗಿ ಕಾಣಬಹುದೇ. ಇಲ್ಲ, ಇವತ್ತಿಗೂ ತಾನು ಅವಳವನಾಗಿಯೇ ಇದ್ದೇನೆ. ಇನ್ನು ನಿರ್ಮಲಾ ಬದುಕಿಲ್ಲದಿದ್ದರೂ ನನ್ನವಳಾಗಿಯೇ ಇದ್ದಾಳೆ. ಹಾಗಿರುವಾಗ ಅದು **illusion** ಹೇಗೆ? ಅದೇ ಒಂದು ಸತ್ಯ! ಇನ್ನು ನಿರ್ಮಲಾಳ ಕನಸು... ಹೋಗುವಾಗ ಅವಳು ಅದನ್ನು ಕಣ್ತುಂಬಿಯೆ ಹೋದಳು. ಒಂದೇ